ವಿವರಗಳನ್ನು ಈ ವರ್ಷದವರೆಗೆ ತಿಳಿಸುವುದು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ನಿಜ.

ಈ ಪೈಪುಗಳಿಗೆ ಟೈಲೆಕ್ಸ್ ಜರ್ಮನ್ ತಾಂತ್ರಿಕ ವಿಧಾನವನ್ನು ಬಳಸಲಾಗಿದೆ.

ಆ) ಮಲಪ್ರಭಾ ಯೋಜನೆಯಿಂದ 1983ರಿಂದ ಮಹಾನಗರಸಭೆಗೆ ನೀರು ಪೂರೈಸಲಾಗುತ್ತಿದೆ. ಸದರಿ ಪೈಪ್‌ಲೈನ್ ಎರೆ ಭೂಮಿಯಲ್ಲಿ ಹಾಯ್ದು ಹೋಗುತ್ತಿರುವ ಭಾಗಗಳಲ್ಲಿ ಸೋರುವಿಕೆ ಉಂಟಾಗುತ್ತಿದೆ. ಈ ಸೋರುವಿಕೆಯನ್ನು ತಡೆಗಟ್ಟಲು ಸೀಸ, ಎಂ.ಸೀಲ್, ಎಫಾಕ್ಸಿ ಹಾಗೂ ಹೆಂಪ್‌ಯಾರ್ನವನ್ನು ಬಳಸಲಾಗುತ್ತಿದೆ. ಅವಶ್ಯವಿದ್ದಾಗ ವೆಲ್ಡಿಂಗನ್ನು ಕೂಡಾ ಮಾಡಲಾಗುತ್ತಿದೆ.

ಇ) ಈ ಯೋಜನೆಯಡಿಯಲ್ಲಿ ಒಟ್ಟು 28 ಕಿ.ಮೀ.ಪೈಪನ್ನು ಸವದತ್ತಿಯಿಂದ ಅಮೀನಬಾವಿವರೆಗೆ ಹಾಕಲಾಗಿದ್ದು, ಇದರಲ್ಲಿ 6500 ಜೋಡಣೆಗಳು ಇದ್ದು ಇದರಲ್ಲಿ 165 ಸೋರುವಿಕೆಗಳು ಕಂಡು ಬಂದಿವೆ. ಇದರಲ್ಲಿ ಸುಮಾರು ಮಧ್ಯಮ ಪ್ರಮಾಣದ ಸೋರುವಿಕೆಗಳು ಹಾಗೂ ಉಳಿದವು ಅತಿಕಡಿಮೆ ಪ್ರಮಾಣದ ಸೋರುವಿಕೆಗಳು ಇರುತ್ತವೆ. ಪ್ರತಿ ವರ್ಷಕ್ಕೆ ರೂ. 1.84 ಲಕ್ಷ ಗಳಂತೆ ಇದುವರೆಗೆ ರೂ.25.88 ಲಕ್ಷಗಳು ಖರ್ಚಾಗಿರುತ್ತದೆ.

ಈ) ಒಟ್ಟು ರಿಪೇರಿ ಮಾಡಿದ್ದ ಸೋರುವಿಕೆಯಲ್ಲಿ ಶೇಕಡಾ 5ರಷ್ಟು ಅದೇ ಸ್ಥಳದಲ್ಲಿ ಲೀಕೇಜ್‌ಗಳು ಕಂಡು ಬಂದಿವೆ. ಹೊಸ ಜಾಗಗಳಲ್ಲಿ ಸೋರಿಕೆಗಳು ಇಲ್ಲಿಯವರೆಗೆ ಯಾವುದು ಕಂಡು ಬಂದಿಲ್ಲ. 1983 ರಿಂದ ಜುಲೈ 1997ರವರೆಗೆ ಖರ್ಚು ಮಾಡಿದ ಒಟ್ಟು ಹಣ ಪ್ರತಿ ವರ್ಷ ಸುಮಾರು ರೂ. 1,84,000-00 ಇರುತ್ತದೆ. ಅಂದರೆ 14 ವರ್ಷಗಳ ಅವಧಿಯಲ್ಲಿ ಒಟ್ಟು 25.88 ಲಕ್ಷ ಆಗಿರುತ್ತದೆ. ಈ ವೆಚ್ಚವು ಸೋರುವಿಕೆಗಳ ಸಂಖ್ಯೆಗಳ ಮೇಲೆ ಅವಲಂಬಿತವಾಗಿದೆ.

ವಿಷಯ: ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಕುರಿತು.

2547 (3421)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಐದು ವರ್ಷಗಳಿಂದ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ಇಲ್ಲಿಯವರೆಗೆ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ

ಇದರಲ್ಲಿ ಹಂಚಿಕೆಯಾದ ನಿವೇಶನಗಳೆಷ್ಟು?

ಆ) ನಗರಾಭಿವೃದ್ಧಿ ಪ್ರಾಧಿಕಾರದವರು ಹುಬ್ಬಳ್ಳಿ ತಾಲ್ಲೂಕ್ ಪೈಕಿ ಅಮರಗೋಳ, ಸುತಗಟ್ಟಿ ಬೈರಿದೇವರಕೊಪ್ಪ, ಉಣಕಲ್ ಗ್ರಾಮಗಳಲ್ಲಿಯ ಜಮೀನುಗಳನ್ನು ನಿಯಮಾನುಸಾರ ಭೂಸ್ವಾಧೀನಪಡಿಸಿಕೊಳ್ಳದೇ ಗ್ರಾಮ ದಪ್ತರಲ್ಲಿ ''ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಭೂಸ್ವಾಧೀನಕ್ಕೊಳಪಟ್ಟಿದೆ'' ಅಂತಾ ನಮೂದಿಸಿರುವುದು ಸುಮಾರು 5 ವರ್ಷಗಳ ಮೇಲೆ ಹಾಗೆಯೇ ಮುಂದುವರೆದದ್ದು, ಸರ್ಕಾರದ ಗಮನಕೆ ಬಂದಿದೆಯೇ?

ಇ) ಬಂದಿದ್ದರೆ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು, ವಿವರ ನೀಡುವುದು.

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

ಅ) ಕಳೆದ ಐದು ವರ್ಷಗಳಲ್ಲಿ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಸತಿ ಯೋಜನೆಗಾಗಿ ಸುಮಾರು 620ಎಕರೆ 39 ಗುಂಟೆ ಕ್ಷೇತ್ರಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಇದರಲ್ಲಿ ವಿವಿಧ ಅಳತೆಯ ಒಟ್ಟು 4,057 ನಿವೇಶನಗಳನ್ನು ಇಲ್ಲಿಯವರೆಗೆ ವಿತರಿಸಲಾಗಿದೆ.

ಆ ಮತ್ತು ಇ) ಹೌದು.

ಉಣಕಲ್ ಗ್ರಾಮದ 1,11 ಮತ್ತು 111ನೇ ಹಂತದಲ್ಲಿ ಹಾಗೂ ಬೈರಿದೇವರಕೊಪ್ಪದ 1ನೇ ಹಂತದಲ್ಲಿ ವಸತಿ ಯೋಜನೆಗೆ ಸುಮಾರು 531 ಎಕರೆ 32 ಗುಂಟೆಗಳಷ್ಟು ಜಮೀನನ್ನು ಭೂಸ್ವಾಧೀನಕ್ಕೆ ಒಳಪಡಿಸಲಾಗಿದೆ. ಮೇಲೆ ತಿಳಿಸಿದ 4 ಯೋಜನೆಗೆ ಸರ್ಕಾರದಿಂದ ಅಂತಿಮ ಅಧಿಸೂಚನೆಯಾಗಿ ರಾಜ್ಯಪತ್ರದಲ್ಲಿ ಪ್ರಕಟಣೆಗೊಂಡಿರುವುದರಿಂದ ಸದರಿ ಜಮೀನುಗಳ ಪಹಣಿಪತ್ರ ಇತರೆ ಹಕ್ಕಿನಲ್ಲಿ ಪ್ರಾಧಿಕಾರಕ್ಕೆ ಒಳಪಟ್ಟಿದೆ ಎಂಬುದಾಗಿ ದಾಖಲೆ ಇರುತ್ತದೆ.

ಅಮರಗೋಳ ಮತ್ತು ಸುತಗಟ್ಟಿ ಈ ಎರಡು ಗ್ರಾಮಗಳ ಪೈಕಿ ಅಮರಗೋಳಗ್ರಾಮದಲ್ಲಿ ವಸತಿ ಯೋಜನೆಗಾಗಿ ಸುಮಾರು 122 ಎಕರೆ 06 ಗುಂಟೆ ಕ್ಷೇತ್ರವನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿತ್ತು. ಇದರಲ್ಲಿ ಸರ್ಕಾರವು ಕೆಲವು ಭೂಮಿಯನ್ನು ಭೂಸ್ವಾಧೀನ ಕ್ರಮದಿಂದ ಕೈಬಿಟ್ಟಿರುವುದರಿಂದ ಅದು ಸರ್ಕಾರಿ ಪತ್ರದಲ್ಲಿ ಪ್ರಕಟವಾದ ನಂತರ ಪಹಣಿ ಪತ್ರದಲ್ಲಿ ಸೂಕ್ತ ಬದಲಾವಣೆ ಮಾಡಲಾಗುವುದು. ಸುತಗಟ್ಟಿ ಗ್ರಾಮದಲ್ಲಿ ವಸತಿ ಯೋಜನೆಗಾಗಿ ಯಾವುದೇ ಜಮೀನುಗಳನ್ನು ಭೂ ಸ್ವಾಧೀನಕ್ಕೆ ಒಳಪಡಿಸಿರುವುದಿಲ್ಲ.

ವಿಷಯ: ರೋಜ್‌ಗಾರ ಯೋಜನೆಯಡಿಯಲ್ಲಿ ನಿರುದ್ಯೋಗಿಗಳಿಗೆ ಅನ್ಯಾಯ.